# ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಅಪರ ಆಯುಕ್ತರು (ಕಂದಾಯ) ರವರ ಕಛೇರಿ, ವಾಣಿಜ್ಯ ಸಂಕೀರ್ಣ ಕಟ್ಟಡ, 2ನೇ ಮಹಡಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು-560011

ಸಂಖ್ಯೆ: ಅ.ಆ(ದ)/ಜನಗಣತಿ/ಪಿಆರ್/12/2026-27 ದಿನಾಂಕ: 21.04.2026

## ಭಾರತದ ಜನಗಣತಿ-2027 ಕಾರ್ಯ ನಿರ್ವಹಣೆಗೆ ಗಣತಿದಾರರ ನೇಮಕಾತಿಗೆ ನೇರ ಸಂದರ್ಶನ

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಭಾರತದ ಜನಗಣತಿ-2027ರ ಮೊದಲನೇ ಹಂತದ ಕಾರ್ಯವಾದ ಮನೆ ಪಟ್ಟಿ ಮತ್ತು ಮನೆ ಗಣತಿ ಕಾರ್ಯ ಹಾಗೂ ಫೆಬ್ರವರಿ 2027ರಲ್ಲಿನ 2ನೇ ಹಂತದ ಜನಗಣತಿ ಕಾರ್ಯದ ಪರಿಣಾಮಕಾರಿಯಾಗಿ ಹಾಗೂ ಕಾಲಮಿತಿಯಲ್ಲಿ ಪೂರ್ಣಗೊಳಿಸುವ ಉದ್ದೇಶ ಹೊಂದಿದ್ದು, ರಾಷ್ಟ್ರೀಯ ಮಹತ್ವದ ಕಾರ್ಯನಿರ್ವಹಿಸುವ ಮೂಲಕ ರಾಷ್ಟ್ರದ ಅಭಿವೃದ್ಧಿ ಕಾರ್ಯಕ್ಕೆ ಕೈಜೋಡಿಸಲು, ಈ ಸಂಬಂಧ ಗಣತಿ ಕಾರ್ಯ ನಿರ್ವಹಿಸಲು ಆಸಕ್ತ, ವಿದ್ಯಾರ್ಥಿಗಳು, ಪುರುಷ ಹಾಗೂ ಮಹಿಳೆಯರ ನೇರ ಸಂದರ್ಶನಕ್ಕೆ ಹಾಜರಾಗಲು ತಿಳಿಸಿದೆ.

### ಗಣತಿದಾರರ ಸಂಖ್ಯೆ, ವಿದ್ಯಾರ್ಹತೆ, ಗೌರವ ಧನ ಹಾಗೂ ಇನ್ನಿತರೆ ವಿವರ :

1. ವಿದ್ಯಾರ್ಹತೆ: ದ್ವಿತೀಯ ಪಿ.ಯು.ಸಿ. ಹಾಗೂ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿರಬೇಕು.
2. ಕನಿಷ್ಠ **Android-12, 4 GB RAM Specification** ಮೊಬೈಲ್ ಹೊಂದಿರಬೇಕು.
3. ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ **ಬೊಮ್ಮನಹಳ್ಳಿ ವಲಯ** (1) ಬೊಮ್ಮನಹಳ್ಳಿ (2) ಹೆಚ್.ಎಸ್.ಆರ್ (3) ಅರಕೆರೆ (4) ಪುಟ್ಟೇನಹಳ್ಳಿ (5) ಸಿಂಗಸಂದ್ರ (6) ಕೂಡ್ಲು (7) ಕೋರಮಂಗಲ (8) ಬಿ.ಟಿ.ಎಮ್ ಹಾಗೂ (9) ಕಸವನಹಳ್ಳಿ ಮತ್ತು **ಜಯನಗರ ವಲಯ** (1) ಬೇಗೂರು (2) ಅಂಜನಾಪುರ (3) ಗೊಟ್ಟಿಗೆರೆ (4) ತಲಘಟ್ಟಪುರ (5) ಉತ್ತರಹಳ್ಳಿ (6) ಯಲಚೇನಹಳ್ಳಿ (7) ಜೆ.ಪಿ.ನಗರ (8) ಜಯನಗರ ಹಾಗೂ (9) ಬನಶಂಕರಿ ಕ್ಷೇತ್ರಗಳ ನಿವಾಸಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.
4. ಮೊದಲ ಹಂತದ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು **ದಿನಾಂಕ: 15.05.2026** ವರೆಗೆ ನಡೆಯಲಿದ್ದು, ಅಲ್ಲಿಯವರೆಗೆ ರಜಾ ದಿನವೂ ಸೇರಿದಂತೆ ನಿರಂತರವಾಗಿ ಕಾರ್ಯನಿರ್ವಹಿಸಲು ಬದ್ಧರಾಗಿರಬೇಕು.
5. ಭಾರತದ ಜನಗಣತಿ-2027ರ ಜನಗಣತಿ ಮಾರ್ಗಸೂಚಿಯನ್ವಯ **ದಿನಾಂಕ: 15.05.2026** ವರೆಗಿನ ಮೊದಲ ಹಂತದ ಒಂದು ಬ್ಲಾಕ್‌ಗೆ ಗಣತಿ ಕಾರ್ಯಕ್ಕೆ **ರೂ.9,000/- (ರೂ. ಒಂಭತ್ತು ಸಾವಿರ ಮಾತ್ರ)** ಗೌರವಧನ ನೀಡಲಾಗುವುದು (ಕನಿಷ್ಠ 150-200 ಮನೆಗಳಿಗೆ) ಎರಡು ಬ್ಲಾಕ್‌ಳಿಗೆ ರೂ.18,000/-ಗಳು (ಅಂದಾಜು 400 ಮನೆಗಳು)
6. ಭಾರತದ ಜನಗಣತಿ-2027ರ 2ನೇ ಹಂತದ ಕಾರ್ಯವು ಫೆಬ್ರವರಿ-2027 ರ ಮಾಹೆಯಲ್ಲಿ ನಡೆಯಲಿದ್ದು, ಸದರಿ ಕಾರ್ಯಕ್ಕೆ **ರೂ. 16,000/- (ರೂ. ಹದಿನಾರು ಸಾವಿರ ಮಾತ್ರ)** ಗೌರವಧನ ನೀಡಲಾಗುವುದು. (150-200 ಮನೆಗಳಿಗೆ ಅಥವಾ 750 ರಿಂದ 800 ಜನಸಂಖ್ಯೆಗೆ)
7. ಈ ಆಯ್ಕೆಯು ಭಾರತದ ಜನಗಣತಿ-2027ರ ಗಣತಿ ಕಾರ್ಯ ನಿರ್ವಹಣೆಗೆ ಮಾತ್ರ ಸೀಮಿತವಾಗಿರುತ್ತದೆ.
8. ಆಯ್ಕೆಯಾದವರಿಗೆ ಕಾರ್ಯ ನಿರ್ವಹಣೆ ಅನುಕೂಲವಾಗಲು ಜನಗಣತಿ ಮೊಬೈಲ್ ಅಪ್ಲಿಕೇಷನ್ ನಲ್ಲಿ ಮಾಹಿತಿ ಪಡೆಯುವ ಹಾಗೂ ಗಣತಿ ಕಾರ್ಯನಿರ್ವಹಣೆ ಬಗ್ಗೆ ಮಾಸ್ಟರ್ ಟ್ರೈನರ್ ಗಳಿಂದ ಅಗತ್ಯ ತರಬೇತಿ ನೀಡಲಾಗುವುದು.
9. ಆಯ್ಕೆ ಮಾಡಿಕೊಳ್ಳುವ ಗಣತಿದಾರರ ಬೊಮ್ಮನಹಳ್ಳಿ ವಲಯಕ್ಕೆ 1.163 ಮತ್ತು ಜಯನಗರ ವಲಯಕ್ಕೆ 582 ಒಟ್ಟು ಸಂಖ್ಯೆ: 1,745 ಗಣತಿದಾರರು
10. ನೇಮಕಾತಿ ಮಾಡಿಕೊಳ್ಳುವುದು ದಕ್ಷಿಣ ನಗರ ಪಾಲಿಕೆ ಮಾನ್ಯ ಆಯುಕ್ತರ ವಿವೇಚನೆಗೆ ಒಳಪಟ್ಟಿರುತ್ತದೆ.

**ನೇರ ಸಂದರ್ಶನ ದಿನಾಂಕ, ಸಮಯ ಮತ್ತು ಸ್ಥಳ :**
**ದಿನಾಂಕ:22.04.2026 (ಬುಧವಾರ) ಮತ್ತು 23.04.2026 (ಗುರುವಾರ)**
**ಸಮಯ: ಬೆಳಗ್ಗೆ 11.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ**

**ಸ್ಥಳ:** 1) ಬೊಮ್ಮನಹಳ್ಳಿ ವಲಯ: ಜಂಟಿ ಆಯುಕ್ತರವರ ಕಛೇರಿ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೇಗೂರು. ಬೊಮ್ಮನಹಳ್ಳಿ ರೋಡ್, CMC ಬಿಲ್ಡಿಂಗ್, ಬೆಂಗಳೂರು. **(ಜಂಟಿ ಆಯುಕ್ತರು ರವರ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 8762716711 ಮತ್ತು ಉಪ ಆಯುಕ್ತರು ರವರ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 9480684353)**

2) ಜಯನಗರ ವಲಯ ಶಾಶ್ವತಿ ಆಡಿಟೋರಿಯಮ್, NMKRV COLLEGE, JAYANAGAR, 3" BLOCK, BENGALURU. **(ಜಂಟಿ ಆಯುಕ್ತರು ರವರ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 9481492649 ಮತ್ತು ಉಪ ಆಯುಕ್ತರು ರವರ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 9916536036)**

**ಮಾನ್ಯ ಆಯುಕ್ತರ ಆದೇಶದ ಮೇರೆಗೆ**

ಸಹಿ/- ಅಪರ ಆಯುಕ್ತರು (ಕಂದಾಯ)
ಬೆಂಗಳೂರು ದಕ್ಷಿಣ ನಗರ ಪಾಲಿಕೆ